**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 03.09.2021.

**1] ಮಹಿಳಾ ಪೊಲೀಸ ಠಾಣೆ ಗುನ್ನೆ ನಂ: 100/2021 ಕಲಂ: 498(ಎ), 323, 324, 326, 504, ಐಪಿಸಿ**

ದಿನಾಂಕ: 01.09.2021 ರಂದು 23.45 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಬಂದೇನವಾಜ ಅಲ್ಲಾಬಕ್ಷ ಬಂಗಡಿವಾಲೆ ಸಾ॥ ನಿಸಾರಮಡ್ಡಿ ವಿಜಯಪುರ ಆರೋಪಿತನು ಪಿರ್ಯಾದಿಯ ಗಂಡ, ಇದ್ದು, ಪಿರ್ಯಾದಿಯ ನೆಗಿಯಾಣಿಯಾದ ಶಿರಿನ್ ಇವಳ ಜೊತೆಯಲ್ಲಿ ಅನೈತಿಕ ಸಂಬಂದ ಹೊಂದಿದ್ದು ಅದನ್ನು ಪಿರ್ಯಾದಿಯು ಕೇಳಿದ್ದರಿಂದ ಪಿರ್ಯಾದಿಯ ಜೊತೆಗೆ ಜಗಳ ಮಾಡುತ್ತಾ ಬಂದಿದ್ದು ಅಲ್ಲದೇ ಮೊದಲು ಪಿರ್ಯಾದಿಯು ತವರು ಮನೆಗೆ ಹೋಗುತ್ತೇನೆ ಅಂತಾ ಕೇಳಿದರೆ ಬೇಡಾ ಅಂತಾ ಅನ್ನುತ್ತಿದ್ದವನು ಈಗ ನೀನು ನಿನ್ನ ತವರು ಮನೆಗೆ ಹೋಗು ಅಂತಾ ಒತ್ತಾಯ ಮಾಡಲಿಕ್ಕೆ ಹತ್ತಿದ್ದು ಅಲ್ಲದೇ ಪಿರ್ಯಾದಿಯ ಜೊತೆಗೆ ಜಗಳ ಮಾಡುವುದು ಬೈದಾಡುವುದು ಹೊಡಿ ಬಡಿ ಮಾಡುವುದು ಶಿರಿನ್ ಇವಳ ಜೊತೆಗೆ ಖುಷಿಯಿಂದ ಇರುವುದು ಮಾಡುತ್ತಿದ್ದು ಅಲ್ಲದೆ ಪಿರ್ಯಾದಿಯ ಗಂಡನು ಮನೆಗೆ ಬಂದು ಪಿರ್ಯಾದಿಗೆ ನಿನ್ನ ತವರು ಮನೆಗೆ ಹೋಗು ಅಂದರೆ ಯಾಕೆ ಹೋಗಿರುವುದಿಲ್ಲ ಅಂತಾ ಜಗಳಾ ತೆಗೆದು ತವರು ಮನೆಗೆ ಹೋಗು ನಾನು ಶಿರಿನ್ ಇವಳ ಜೊತೆಗೆ ಇರುತ್ತೇನೆ ಅಂತಾ ಹೇಳಿದ್ದು ಆಗ ಪಿರ್ಯಾದಿಯು ಹೋಗುವುದಿಲ್ಲ ಅಂತಾ ಹೇಳಿದ್ದು ಅದಕ್ಕೆ ಪಿರ್ಯಾದಿಯ ಗಂಡನು ಸಿಟ್ಟಾಗಿ ಪಿರ್ಯಾದಿಗೆ ಬೈದಾಡುತ್ತಾ ಅಲ್ಲಿಯೇ ಮನೆಯಲ್ಲಿ ಇದ್ದ ಹತೋಡಿಯಿಂದ ಪಿರ್ಯಾದಿಯ ಬಾಯಿಗೆ ಹೊಡೆದಿದ್ದು ಪಿರ್ಯಾದಿಯ ಬಾಯಲ್ಲಿನ ಮೇಲ್ಬಾಗದ ಹಲ್ಲು ಮುರಿದು ಅಲುಗಾಡಲಿಕ್ಕೆ ಹತ್ತಿದ್ದು ಅಲ್ಲದೆ ಕೆಳಗಿನ ತುಟಿಯ ಒಳಗಿನ ಬಾಗದಲ್ಲಿ ರಕ್ತಗಾಯಪಡಿಸಿದ ಬಗ್ಗೆ ವಗ್ಯೆರೆ ಪಿರ್ಯಾದಿಯಲ್ಲಿ ನಮೂದ ಇರುತ್ತದೆ. ಈ ಬಗ್ಗೆ ತಸ್ಮಿಯಾ ಬಂದೇನವಾಜ ಬಂಗಡಿವಾಲೆ ಸಾ॥ ನಿಸಾರಮಡ್ಡಿ ಹಾಲಿ ಬಡಿಕಮಾನ ಹತ್ತಿರ ನಾಗರಬಾವಡಿ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 02.09.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಬಬಲೇಶ್ವರ ಪೊಲೀಸ ಠಾಣೆ ಗುನ್ನಾ. ನಂ: 123/2021 ಕಲಂ: 279 337 338 ಐ.ಪಿ.ಸಿ.**

ದಿನಾಂಕ: 02.09.2021 ರಂದು ನಸುಕಿನ 05.45 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಕುಮಾರ ಮಲ್ಲಪ್ಪ ಬಿರಾದಾರ ಸಾ॥ ತಿಗಣಿ ಬಿದರಿ, ಮೊಟರ ಸೈಕಲ್ ನಂ. ಕೆಎ:28 ವ್ಹಿ:6031 ನೇದ್ದರ ಚಾಲಕ. ಈತನು ತನ್ನ ತಂದೆಯಾದ ಮಲ್ಲಪ್ಪ ಬಿರಾದಾರ ಈತನ ಬಾಬತ್ ಇದ್ದ ಮೊಟರ ಸೈಕಲವನ್ನು ಈ ದಿವಸ ಮೊಟರ ಸೈಕಲ ನೇದ್ದನ್ನು ತಗೆದುಕೊಂಡು ಕರಿಬೇವು ಮಾರಾಟ ಮಾಡುವ ಕುರಿತು ವಿಜಯಪುರಕ್ಕೆ ಹೋಗಲು ತನ್ನ ತಾಯಿಯಾದ ಮಹಾದೇವಿ ಗಂಡ ಮಲ್ಲಪ್ಪ ಬಿರಾದಾರ ಇವಳಿಗೆ ಮೊಟರ ಸೈಕಲ ನಂಬರ ಕೆಎ:28 ವ್ಹಿ:6031 ನೇದ್ದರ ಮೇಲೆ ಹಿಂದೆ ಕೂಡಿಸಿಕೊಂಡು ಇದರಲ್ಲಿಯ ಆರೋಪಿತನಾದ ಕುಮಾರ ತಂದೆ ಮಲ್ಲಪ್ಪ ಬಿರಾದಾರ ಇತನು ಮೊಟರ ಸೈಕಲ್ ನಡೆಯಿಸಿಕೊಂಡು ಹೋಗಿದ್ದು ಮುಂದೆ ತನ್ನ ಮೊಟರ ಸೈಕಲವನ್ನು ಅತೀ ಜೋರಾಗಿ ನಿಷ್ಕಾಳಜಿತನದಿಂದ ನಡೆಯಿಸಿಕೊಂಡು ಹೋಗಿ ವಿಜಯಪುರ-ಜಮಖಂಡಿ ಡಾಂಬರ ರಸ್ತೆಯ ಮೇಲೆ ಸಾರವಾಡ ಗ್ರಾಮದ ಡೋಣಿ ಹಳ್ಳದ ಹತ್ತಿರ ಅತೀ ಜೋರಾಗಿ ನಿಷ್ಕಾಳಜಿತನದಿಂದ ನಡೆಯಿಸಿಕೊಂಡು ಹೋಗಿ ಒಮ್ಮೆಲೆ ಮೊಟರ ಸೈಕಲವನ್ನು ಸ್ಕಿಡ ಮಾಡಿ ಕೆಡವಿ ಅಪಘಾತ ಮಾಡಿದ್ದು ಇದರಿಂದ ಹಿಂದೆ ಕುಳಿತ ಸಾಕ್ಷಿದಾರಳಾದ ಮಹಾದೇವಿ ಗಂಡ ಮಲ್ಲಪ್ಪ ಬಿರಾದಾರ ಇವಳಿಗೆ ತಲೆಯ ಹಿಂಬಾಗ ಭಾರಿ ಗಾಯಪೆಟ್ಟಾಗಿದ್ದು ಮತ್ತು ಕೈ-ಕಾಲುಗಳಿಗೆ ಅಲ್ಲಲ್ಲಿ ತರಚಿದ ಗಾಯ ಪೆಟ್ಟಾಗಿದ್ದು ಅದೆ. ಈ ಬಗ್ಗೆ ಶಿವಾನಂದ ಮಲ್ಲಪ್ಪ ಬಿರಾದಾರ ಸಾ॥ ತಿಗಣಿ ಬಿದರಿ ತಾ: ಬಬಲೇಶ್ವರ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 02.09.2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಬ ಬಾಗೇವಾಡಿ ಪೊಲೀಸ ಠಾಣೆ ಗುನ್ನಾ. ನಂ: 155/2021 ಕಲಂ: 279, 337, 338 ಐ.ಪಿ.ಸಿ. & 187 ಎಮ್.ವ್ಹಿ.ಆ್ಯಕ್ಟ**

ದಿನಾಂಕ: 01.09.2021 ರಂದು 18:30 ಗಂಟೆಗೆ ಇದರಲ್ಲಿ ಆರೋಪಿತನಾದ ರಾಮಚಂದ್ರ ಮಧುಕರ ಉಧಲೆ ಸಾ: ತಾಳಿಕೋಟಿ ಕಾರ ನಂಬರ: ಕೆ.ಎ:25 ಎಮ್.ಎ:7834 ನೇದ್ದರ ಚಾಲಕ. ಈತನು ತಾನು ನಡೆಸುತ್ತಿದ್ದ ಕಾರ ನೇದ್ದನ್ನು ತಾಳಿಕೊಟಿ ಕಡೆಯಿಂದ ಹೂವಿನ ಹಿಪ್ಪರಗಿ ಕಡೆಗೆ ಬರುವ ಸಲುವಾಗಿ ತಾಳೀಕೊಟಿ ಹೂವಿನ ಹಿಪ್ಪರಗಿ ರಸ್ತೆಯಲ್ಲಿ ಮಲ್ಲಪ್ಪ ತಾಳಿಕೊಟಿ ಇವರ ಜಮೀನದ ಹತ್ತಿರ ಕಾರನ್ನು ಅತೀ ಜೋರಾಗಿ ಮತ್ತು ನಿರ್ಲಕ್ಷ್ಯತನದಿಂದ ನಡೆಸುತ್ತ ಬಂದು ತನ್ನ ಮುಂದುಗಡೆ ಹೊರಟ ಮೋಟಾರ್ ಸೈಕಲ್ ನಂಬರ ಕೆ.ಎ:32 ವಾಯ್:7439 ನೇದ್ದಕ್ಕೆ ಹಿಂದುಗಡೆ ತನ್ನ ಕಾರಿನ ಎದುರಿನಿಂದ ಬಲವಾಗಿ ಹಾಯಿಸಿ ಅಪಘಾತ ಪಡಿಸಿದ್ದು, ಇದರಿಂದ ಮೋಟಾರ್ ಸೈಕಲ್ ನಡೆಸುತ್ತಿದ್ದ, ಪಿರ್ಯಾದಿಗೆ ಹಾಗೂ ಮೋಟಾರ್ ಸೈಕಲ್ ಮೇಲೆ ಕುಳಿತು ಹೊರಟ ಪಿರ್ಯಾದಿಯ ಹೆಂಡತಿ, ಶಾಂತಾಬಾಯಿ ಗಂಡ ಫ್ರಭು ಚೌದ್ರಿ ವಯಾ-35 ವರ್ಷ, ಪಿರ್ಯಾದಿಯ ದೊಡ್ಡಮ್ಮ ಕಾಶಿಬಾಯಿ ಗಂಡ ಮಲ್ಲಪ್ಪ ಚೌದ್ರಿ ವಯಾ-65 ವರ್ಷ, ಪಿರ್ಯಾದಿಯ ಮಗನಾದ ಮಲ್ಲನಗೌಡ ತಂದೆ ಫ್ರಭು ಚೌದ್ರಿ ವಯಾ-12 ವರ್ಷ ಸಾ: ಎಲ್ಲರೂ ಹೂವಿನ ಹಿಪ್ಪರಗಿ ಇವರಿಗೆ ಸಾದಾ ವ ಭಾರಿ ಸ್ವರೂಪದ ಗಾಯ ಪೆಟ್ಟು ಪಡಿಸಿ ಅಪಘಾತದ ಸಂಗತಿಯನ್ನು ಠಾಣೆಗೆ ತಿಳಿಸದೇ ಹೋದ ಅಫರಾದ. ಈ ಬಗ್ಗೆ ಪ್ರಭು ಸಿದ್ದಣ್ಣ ಚೌದ್ರಿ ಸಾ: ಹೂವಿನ ಹಿಪ್ಪರಗಿ ತಾ: ಬಸವನಬಾಗೇವಾಡಿ. ಜಿ: ವಿಜಯಪೂರ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 02.09,2021 ರಂದು ಬ ಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.